ದಿನಾಂಕಃ 08-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ನನಗೆ 5 ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಸಾಲದ ಬಾಬ್ತು ನನಗೆ ಚೆಕ್ಕು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕೆ ಆರ್ ಪೇಟೆ ತಾಲ್ಲೂಕಿನ ಆನೇಗೊಳ ಗ್ರಾಮದ ಪುಟ್ಟಾಚಾರಿ ರವರ ಮಗ ಪ್ರಸನ್ನ ಕುಮಾರ್ ನನಗೆ ಭಾವ ಆಗಬೇಕು ಎಂದರೆ ಸರಿಯಲ್ಲ. ನನ್ನಸಹೋದರಿಯನ್ನು ಪ್ರಸನ್ನಕುಮಾರ್ ರವರಿಗೆ ಕೊಟ್ಟಎ ಮದುವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2) ದಿನಾಂಕ 02.02.2024 ರಂದು ಆರೋಪಿ ಮತ್ತು ನನ್ನ ಭಾವ ಪ್ರಸನ್ನಕುಮಾರ್ ನಡುವೆ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಕಾಟ್ನಾಳು ಗ್ರಾಮ ಸರ್ವೆ ನಂ. 71/3 ರಲ್ಲಿರುವ 13 ಗುಂಟೆ ಜಮೀನನ್ನು ನನ್ನ ಭಾವ ಪ್ರಸನ್ನಕುಮಾರ್ ರವರಿಗೆ ಮಾರಾಟ ಮಾಡುತ್ತೇನೆ ಎಂದು ಒಪ್ಪಿ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಪ್ರಸನ್ನಕುಮಾರ್ ಆರೋಪಿಗೆ ರೂ. 2 ಲಕ್ಷ ಹಣ ನೀಡಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ 4,90,000/- ಪಾವತಿ ಮಾಡಿದ್ದೇವೆ ಎಂದು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಆರೋಪಿ ಮತ್ತು ಅವರ ಹೆಂಡತಿ ಮಕ್ಕಳು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ನೋಂದಣಿ ಆಗುವ ಕಾಲಕ್ಕೆ ನಾನು ಸಹ ಹಾಜರಿದ್ದೆ ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ಮಕ್ಕಳು ಕರಾರು ಪತ್ರಕ್ಕೆ ಸಹಿ ಮಾಡುವವರೆಗೂ ಭದ್ರತೆಗಾಗಿ ನನ್ನ ಭಾವ ಆರೋಪಿ ಯಿಂದ ಚೆಕ್ಕು ಪಡೆಕೊಂಡಿರುತ್ತಾರೆ ಎಂದರೆ ಸರಿಯಲ್ಲ. ರೂ. 2 ಲಕ್ಷ ಹಣಕ್ಕೆ ಬಡ್ಡಿ ಪಾವತಿ ಮಾಡುತ್ತೇವೆ ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ನಾನು

ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಈ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ